ಪೋಲೀಸ್ ಇಲಾಖೆಯ ವಶಕ್ಕೆ ಕೊಡಬೇಕಾದ ಪರಿಸ್ಥಿತಿ ಬಂತು. ನೀವು ಎಲ್ಲಿ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಿರೋ ಆಲ್ಲಿ ಒಂದು ಶಾಲೆಯ ಉಪಾಧ್ಯಾಯರು ಒಂದು ಮನೆಗೆ ಪ್ರವೇಶ ಮಾಡಿ ಒಂದುವರೆ ವರ್ಷವಾಯಿತು; ಅವರು ಇವತ್ತಿನ ದಿವಸ ಹೊರಗೆ ಬರುತ್ತಿಲ್ಲ. ಆದರೂ ಕೂಡ ಕಾನೂನು ಮೂಲಕ ಅವರನ್ನು ಹೊರಗೆ ತರುತ್ತಿದ್ದೀರೆಂಬುದು ಬಹಳ ಶೋಚನೀಯ ವಾದ ವಿಚಾರ. ನಿಮ್ಮ ಅಧಿಕಾರಿ ಗಳನ್ನು ಕೇಳಿದಾಗ ಅರ್ಜಿ ಹಾಕು ಎಂಬುದಕ್ಕೆ ಆತ ಹಾಕಿದ; ನಂತರ ಆತ ಒಂದು ಮನೆಯನ್ನು ಪ್ರವೇಶ ಮಾಡಿದ. ಈಗ ಪ್ರವೇಶ ಮಾಡಿ ಒಂದುವರೆ ವರ್ಷದಿಂದ ವಾಸಿವಾಗಿದ್ದಾನೆ; ಕೊಡಬೇಕಾದ ಹಣವನ್ನು ಕೊಡೆತ್ತೇನೆಂದರೂ ಕೂಡ ಕಟ್ಟಿಸಿಕೊಂಡಿಲ್ಲ. ನಿಮ್ಮ ಅಧಿಕಾರಿಗಳು ಆತನ ಮೇಲೆ ಈಗ ಕೇಸ್ ಹಾಕು ತ್ತೇವೆಂದು ಹೇಳುತ್ತಿದ್ದಾರೆ ಇದರಲ್ಲಿ, ಆವನದು ತಪ್ಪಿಲ್ಲ ಮತ್ತು ಇವರದು ತಪ್ಪಿಲ್ಲ ಅರ್ಜಿ ಹಾಕಿದ ಮನೆಯಲ್ಲಿ ವಾಸವಾಗಿದ್ದಾನೆ; ಇವತ್ತು ಇಂಥ ಪರಿಸ್ಥಿತಿ ಆಗುತ್ತಿದೆ. ಯಾವ ಪ್ರದೇಶದಲ್ಲಾಗಲೀ ಮನೆ ಗಳನ್ನು ಕಟ್ಟಿದ ತಕ್ಷಣ ವಿತರಣೆ ಮಾಡದಿದ್ದರೆ ಅಂಥ ಮನೆಗಳನ್ನು ನೋಡಿದರೆ ಮನಸ್ಸಿಗೆ ತುಂಬಾ ನೋವಾಗುತ್ತದೆ. ಮಾನ್ಯ ರಾಮದೇವ್‌ರವರು ಮಾತಾನಾಡುತ್ತಾ ನಮ್ಮ ದೇಶದಲ್ಲಿ ಒಂದು ಕೋಣೆ ಯಲ್ಲಿ ೭೫ ಜನ ವಾಸಿಸತಕ್ಕ ಪರಿಸ್ಥಿತಿ ಇದೆ ಎಂದು ಹೇಳಿದರು. ಇದು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ವಲ್ಲ, ಹಳ್ಳಿಗಾಡಿನಲ್ಲೂ ಇದೆ- ಆದುದರಿಂದ ಮನೆಗಳನ್ನು ಕಟ್ಟಿತಕ್ಕ ಮತ್ತು ಕಟ್ಟಿದ ಕೂಡಲೇ ವಿತರಣೆ ಮಾಡತಕ್ಕ ವ್ಯವಸ್ಥೆ ಶೀಘ್ರಗತಿಯಲ್ಲಿ ಆಗಬೇಕೆಂದು ಒತ್ತಾಯ ಮಾಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪು ನೀರು ಕುಡಿದು ಚುರುಕಿನ ಮಂತ್ರಿಗಳು ಇದ್ದಾರೆ. ಅವರು ಈ ಒಂದು ಕೆಲಸವನ್ನು ತೀವ್ರಗತಿ ಯಲ್ಲಿ ಮಾಡಿಕೊಡುತ್ತಾರೆಂದು ನಂಬಿ ಮಾನ್ಯ ಅಧ್ಯಕ್ಷರು ಗಂಟೆ ಹೊಡೆಯುವುದಕ್ಕೆ ಮುಂಚಿತವಾಗಿಯೇ ನಾನು ನನ್ನ ಮಾತುಗಳನ್ನು ಮುಗಿಸಬೇಕೆಂಬುದು ಆಸೆ. ಇಷ್ಟು ಕಾಲಾವಕಾಶವನ್ನು ಒದಗಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೂ ಮತ್ತು ತಮಗೂ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Business of the House

MR. SPEAKER.—The Business Advisory Committe at a meeting held to-day have recommended that discussion and voting of demands for grants and passing of appropriation bills should be completed by 31st May, 1979.

Further programme of business of the House will be indicated to members later. A revised programme of discussion of demands for grants is being circulated to members.

The discussion on the Housing Demands will continue tomorrow in addition to the discussion on the Demand relating to the Minister of State for Youth Services and the Minister of State for women and Child Welfare.

The House now stands adjourned to meet tomorrow at 12 noon.

The House adjourned at Five Minutes past Six of the Clock to meet again at Twelve of the Clock on Wednesday, the 16th May 1979.